**ದಿನಾಂಕ 14-07-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ.ಎಮ್.ಎ.ಎಚ್ ವಕೀಲರಿಂದ ವಾದಿ ಪರವಾಗಿ**

1. ನಾನು ಬಿ.ಎ ಪದವೀದರನಾಗಿದ್ದೇನೆ. ನಿಮಗೆ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಈ ಪ್ರಕರಣದಲ್ಲಿ ಸಲ್ಲಿಸಿದ ಪ್ರತಿವಾದ ಪತ್ರ ಇಂಗ್ಲೀಷ ಭಾಷೆಯಲ್ಲಿ ಇದೆ ಎಂದರೆ ಸರಿ. ಸದರಿ ಪ್ರತಿವಾದ ಪತ್ರವನ್ನು ನಿಮ್ಮ ವಕೀಲರು ತಯಾರಿಸಿದ್ದಾರೆ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಗೊತ್ತಿದೆ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಆಂಗ್ಲ ಭಾಷೆಯಲ್ಲಿ ಇದ್ದು, ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ ಎಂದರೆ ಗೊತ್ತಿದೆ ಎಂದು ಸಾಕ್ಷಿ ಹೇಳುತ್ತಾರೆ. ದಾವಾ ಆಸ್ತಿ ಸಂಖ್ಯೆ 144/2 ರ ಈಗಿನ ಚಕಬಂದಿ ಹೇಳಬಹುದಾ ಎಂದರೆ ಪೂರ್ವಕ್ಕೆ ಮಹಾಲಿಂಗ ಹಗಲಗಾರ ಅವರ ಜಮೀನು, ಪಶ್ಚಿಮಕ್ಕೆ ಗುರುಪಾದಯ್ಯ ವಿಭೂತಿ ಅವರ ಜಮೀನು, ದಕ್ಷಿಣಕ್ಕೆ ಸೋರಗಾಂವ ಮುಗಳಖೋಡ ರಸ್ತೆ, ಉತ್ತರಕ್ಕೆ ಶಂಕ್ರೆವ್ವ ಬಾಳಿಗಿಡದ ಅವರ ಜಮೀನು ಎಂದು ಸಾಕ್ಷಿ ಹೇಳುತ್ತಾರೆ. ನೀವು ಆಸ್ತಿ ಖರೀದಿಸಿದಾಗ ಸದರಿ ಆಸ್ತಿಯ ಚಕಬಂದಿ ಏನು ಇತ್ತು ಎಂದು ಹೇಳಬಹುದಾ ಎಂದರೆ ಪೂರ್ವಕ್ಕೆ ಪ್ರಹ್ಲಾದ ನಿಂಗಪ್ಪ ಗುರವ್ವ ಅವರ ಜಮೀನು, ಪಶ್ಚಿಮಕ್ಕೆ ವೆಂಕಟಗೌಡ ಪಾಟೀಲ ಅವರ ಜಮೀನು, ದಕ್ಷಿಣಕ್ಕೆ ಸೋರಗಾಂವ ಮುಗಳಖೋಡ ರಸ್ತೆ, ಉತ್ತರಕ್ಕೆ ಶಂಕ್ರೆಪ್ಪ ಹೊಸಮನಿ ಅವರ ಜಮೀನು ಎಂದು ಸಾಕ್ಷಿ ಹೇಳುತ್ತಾರೆ.

2. ಮೇಲೆ ಹೇಳಿದ ಆಸ್ತಿ ಇದು ಮೂಲತಃ ತಮ್ಮಣ್ಣ ಭೀಮರಾಯಪ್ಪ ಬಿ.ಪಾಟೀಲ ಅವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ತಮ್ಮ ಪಾಟೀಲ ಅವರಿಗೆ ರಾಮಚಂದ್ರ, ಹಣಮಂತ ಮತ್ತು ಮಲ್ಲಪ್ಪ ಎಂದು ಮಕ್ಕಳು ಎಂದರೆ ಸರಿ. ಸದರಿ ತಮ್ಮಣ್ಣ ಅವರು ದಿಃ17.04.1951 ರಂದು ಮೃತರಾದ ನಂತರ ಅವರ 3 ಜನ ಮಕ್ಕಳು ವಾರಸಾ ಆದರು ಎಂದರೆ ಸರಿ. ರಾಮಚಂದ್ರಪ್ಪ ಇವರು ಮದುವೆ ಆಗದೇ ತೀರಿಕೊಂಡರು ಎಂದರೆ ಸರಿ. ಆದ್ದರಿಂದ ಹಣಮಂತ ಮತ್ತು ಮಲ್ಲಪ್ಪ ಇವರು ನೇರವಾರಸುದಾರರು ಆದರು ಎಂದರೆ ಸರಿ. ಹಣಮಂತ ಅವರು ತೀರಿಕೊಂಡ ನಂತರ ಚೆನ್ನವ್ವ ಮತ್ತು ಮಲ್ಲಪ್ಪ ಇವರು ಸದರಿ ಆಸ್ತಿಯ ವಾರಸುದಾರರು ಆದರೂ ಎಂದರೆ ಸಾಕ್ಷಿಯು 1976 ರಲ್ಲಿ ವಿಭಾಗ ಆಗಿದ್ದು, ಚಿನ್ನವ್ವ ಹಣಮಂತ ಅವರ ವಾರಸುದಾರರು ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ 1976 ರಲ್ಲಿ ಆದ ವಿಭಾಗ ಪತ್ರವನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ ಎಂದು ಹೇಳುತ್ತಾರೆ. ಅದನ್ನು ಈ ಪ್ರಕರಣದಲ್ಲಿ ಹಾಜರಪಡಿಸಿದ್ದೀರಾ ಎಂದರೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. 1976 ರಲ್ಲಿ ವಿಭಾಗ ಆಗಿದೆ ಎಂದು ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ನಂ.144/2 ರ

ಸ್ವಾಧೀನಾನುಭವದಲ್ಲಿ ಚೆನ್ನವ್ವ ಮತ್ತು ಮಲ್ಲಪ್ಪ ಇಬ್ಬರು ಜಂಟಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಸರ್ವೆ ನಂ.144/1 ರ ಸ್ವಾಧೀನಾನುಭವದಲ್ಲಿ ಹಣಮಂತ ಮತ್ತು ಮಲ್ಲಪ್ಪ ಇವರು ಜಂಟಿಯಾಗಿ ಇದ್ದರು ಎಂದು ನೀವು ಪ್ರತಿವಾದಪತ್ರದ 4 ನೇ ಕಂಡಿಕೆಯಲ್ಲಿ ನಮೂದಿಸಿದ್ದು ಅದು ಸರಿ ಇದೆಯೋ ಇಲ್ಲವೋ ಎಂದರೆ ತಪ್ಪು ಇದೆ ಎಂದು ಹೇಳುತ್ತಾರೆ. ಆದ್ದರಿಂದ ಪ್ರತಿವಾದ ಪತ್ರದಲ್ಲಿ ಬರೆದ ವಿಷಯದ ಬಗ್ಗೆ ನಿಮಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ